

## ತಾರಸಿಯಲ್ಲಿ ನಾಟಿ ಈರುಳ್ಳಿ

ನಾಟಿ ಈರುಳ್ಳಿಯನ್ನು ಹಲವರು ಇಷ್ಟಪಟ್ಟು ಅಡುಗೆಗೆ ಬಳಸುತ್ತಾರೆ. ಪುಟ್ಟ ಪುಟ್ಟ ಗೆಡ್ಡೆಗಳ ಈ ಈರುಳ್ಳಿಯು ಅಡುಗೆಯ ರುಚಿಯನ್ನು ಹೆಚ್ಚಿಸುತ್ತದೆ. ಬೇರು ತೆಗೆದು ಉಂಡೆ ಉಂಡೆಯಾಗಿ ಸಾರು, ಪಲ್ಯ, ಉಪ್ಪಿಟ್ಟು, ಭಾತ್, ಪಲಾವ್, ಚಿತ್ರಾನ್ನ, ಇತ್ಯಾದಿಗಳಲ್ಲಿ ಇದನ್ನು ಬಳಸುವುದಿದೆ. ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ಸಿಗುವ ದೊಡ್ಡ ಈರುಳ್ಳಿಗಿಂತ ಇದರ ಬೆಲೆ ಹೆಚ್ಚು ಇರುತ್ತದೆ. ಒಮ್ಮೊಮ್ಮೆ ಕಿಲೋ ಗ್ರಾಂಗೆ 100 ರೂಪಾಯಿ ಮೀರುವುದಿದೆ. ಕೆಲವೊಮ್ಮೆ ಸಿಗುವುದೇ ಇಲ್ಲ. ವರ್ಷವಿಡೀ ಬೆಳೆಯಬಹುದಾದ ಈ ನಾಟಿ ಈರುಳ್ಳಿಯನ್ನು ರಾಜ್ಯದ ಕೆಲವೇ ಭಾಗಗಳಲ್ಲಷ್ಟೇ ಕಾಣಬಹುದು. ನಗರವಾಸಿಗಳು ತಮ್ಮ ಮನೆಗಳ ಮೇಲೆ ಕುಂಡಗಳಲ್ಲಿ ಬೆಳೆದುಕೊಳ್ಳಬಹುದು. ನಾನು ಹಾಸನದ ನನ್ನ ಮನೆಯ ತಾರಸಿಯಲ್ಲಿ ಹತ್ತಾರು ಬಗೆಯ ತರಕಾರಿಗಳನ್ನು ಪೋಷಣೆ ಮಾಡಿಕೊಂಡಿದ್ದು, ಈಚೆಗೆ ಕುಂಡಗಳಲ್ಲಿ ಹಾಕಿದ್ದ ನಾಟಿ ಈರುಳ್ಳಿಯನ್ನು ಕಟಾವು ಮಾಡಿಕೊಂಡೆ. ಅದರ ಚಿತ್ರವೇ ಇದು. ಒಂದೊಂದು ಬಿತ್ತನೆ ಗೆಡ್ಡೆಯಿಂದ ನಾಲ್ಕಾರು, ಹತ್ತಾರು ಗೆಡ್ಡೆಗಳು ಹೆಚ್ಚಳವಾಗಿದ್ದವು. ಹತ್ತಾರು ವರ್ಷಗಳಿಂದ ನಾನು ನಾಟಿ ಈರುಳ್ಳಿಯನ್ನು ತಾರಸಿಯಲ್ಲಿ ಬೆಳೆದುಕೊಳ್ಳುತ್ತಿದ್ದು ರೈತರಿಗೆ, ಆಸಕ್ತ ನಗರವಾಸಿಗಳಿಗೆ ಬಿತ್ತನೆ ಗಡ್ಡೆಗಳನ್ನು ಕೊಟ್ಟಿದ್ದೇನೆ. ಬೀಜಗಳಿಂದಲೂ ಈ ತಳಿಯನ್ನು ವೃದ್ಧಿಸಿಕೊಂಡಿದ್ದೇನೆ.

–ವಿಜಯ್ ಅಂಗಡಿ, ಹಾಸನ




## ತಾಳಿ ರೂಪದ ಅರಿಶಿನ ಕೊಂಬು

ಈ ಸಂಕ್ರಾಂತಿಯಲ್ಲಿ ನೆಂಟರ ಮನೆಯಲ್ಲಿ ವಿಶೇಷವೊಂದು ಘಟಿಸಿತು. ವಿವಾಹದ ಮೊದಲ ವರ್ಷದ ಸಂಭ್ರಮ ಹಾಗೂ ಹಬ್ಬಕ್ಕೆಂದು ಮಗಳು ಅಳಿಯ ಸಡಗರದೊಂದಿಗೆ ಬಂದಿದ್ದರು. ಮಗಳಿಗೆ ಬಾಗಿನ ಕೊಡಲೆಂದು ಅರಿಶಿನ ಕುಂಕುಮ, ಫಲ ತಾಂಬೂಲ, ಹಸಿರು ಬಳೆ, ಹೂವು, ರವಿಕೆ ಖಣ, ಬೆಲ್ಲದಚ್ಚು, ಎಳ್ಳು ಬೆಲ್ಲ, ಕಬ್ಬು, ಬಾಳೆಹಣ್ಣು, ಸಕ್ಕರೆ ಅಚ್ಚು, ಸೀರೆ ಎಲ್ಲ ತಯಾರಿ ಮಾಡಿಕೊಳ್ಳಲಾಗಿತ್ತು. ಅರಿಶಿನ ಕೊಂಬೆ ಇಡಲೆಂದು ಪ್ಯಾಕೆಟ್ ತೆರೆದಾಗ ಥೇಟ್ ತಾಳಿ ಮತ್ತು ತಾಳಿ ದಾರದ ರೂಪದ ಅರಿಶಿನ ಕೊಂಬು ಕಂಡಿತು. ಅದನ್ನು ನೋಡಿ ಒಮ್ಮೆ ಅಮ್ಮನ ಅಚ್ಚರಿಗೆ ಪಾರವೇ ಇರಲಿಲ್ಲ. ನವವಿವಾಹಿತ ಮಗಳಿಗೆ ಇದಕ್ಕಿಂತ ಉತ್ತಮ ಉಡುಗೊರೆ ಮತ್ತಾವುದೂ ಇಲ್ಲವೆಂದು ಹೃನ್ಮನ ತುಂಬಿ ಬಂದಿತ್ತು. ಪ್ರಕೃತಿಯ, ಆ ದೈವದ ಆಶೀರ್ವಾದವೇ ಇದೆಂದು ಸಂಭ್ರಮಿಸಿದರು.

–ಸುಪೋಷಿಣಿ, ಬೆಂಗಳೂರು

